2459 (2961) ಶ್ರೀ ಹೆಚ್.ಸಿ ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಮಾಗಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿವೆ;

ಆ) ಆ ಶಾಲೆಗಳಲ್ಲಿರುವ ಅಧ್ಯಾಪಕರ ಸಂಖ್ಯೆ ಎಷ್ಟು ;

ಇ) ಅಧ್ಯಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ, ಆ ಕೊರತೆಯನ್ನು ಯಾವಾಗ ತುಂಬಲಾಗುವುದು ;

ಉ) ಎಷ್ಟು ಶಾಲಾ ಕೊಠಡಿಗಳ ಕೊರತೆ ಇದೆ ;

ಊ) ಈ ಕೊಠಡಿಗಳ ಕೊರತೆ ನೀಗಿಸಲು ಸರ್ಕಾರದ ಕ್ರಮವೇನು ;

ಋ) ಮಾಗಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಉರ್ದು ಶಾಲೆಗಳಿವೆ, ಆ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆಯೇ ;

ೠ) ಇದ್ದಲ್ಲಿ, ಕೊಠಡಿಗಳ ಕೊರತೆ ನೀಗಿಸಲು ಸರ್ಕಾರದ ಕ್ರಮವೇನು ;

ಎ) ಈ ಶಾಲೆಗಳಲ್ಲಿ ಉರ್ದು ಶಿಕ್ಷಕರು ಕಡಿಮೆ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಏ) ಕೊರತೆ ಇರುವ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರದ ಕ್ರಮವೇನು (ವಿವರ ನೀಡುವುದು) ;

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಮಾಗಡಿ ಕ್ಷೇತದ ವ್ಯಾಪ್ತಿಯಲ್ಲಿ ಒಟ್ಟು 410 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿ 297 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 113 ಹಿರಿಯ ಪ್ರಾಥಮಿಕ ಶಾಲೆಗಳಿವೆ.

ಆ) ಈ ಶಾಲೆಗಳಲ್ಲಿರುವ ಅಧ್ಯಾಪಕರ ಸಂಖ್ಯೆ –1144

ಇ) ಬಂದಿದೆ

ಈ) ಈ ಖಾಲಿ ಇರುವ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ

ಉ) 112 ಶಾಲಾ ಕೊಠಡಿಗಳ ಕೊರತೆ ಇದೆ.

ಊ) ಆರ್.ಐ.ಡಿ.ಎಫ್. ಪಿಎಂಜಿವೈ ಇಎಫ್‌ಸಿ. ಯೋಜನೆಯಡಿಯಲ್ಲಿ ಹಂತ ಹಂತವಾಗಿ ಕೊರತೆ ನೀಗಿಸಲಾಗುತ್ತಿದೆ.

ಎಸ್.ಎಸ್.ಎ.ಅಡಿಯಲ್ಲಿ ಎಂ.ಹೆಚ್.ಆರ್.ಡಿ ರೂಪಿಸಿರುವ ನಿಯಮದಂತೆ ಅನುದಾನದಲ್ಲಿ ಶೇ. 33 $^{1}/_{3}$ರಷ್ಟು ಸಿವಿಲ್ ಕಾಮಗಾರಿಗಾಗಿ ಮೀಸಲಿರಿಸಿದೆ. ಇರುವ ಅನುದಾನದಲ್ಲಿ ಅರ್ಹ ಶಾಲೆಗಳಿಗೆ ಸೌಲಭ್ಯವನ್ನು ಒದಗಿಸಲು ಪ್ರಯತ್ನಿಸಲಾಗುವುದು.

ಖ) ಮಾಗಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 36 ಉರ್ದು ಶಾಲೆಗಳಿವೆ. ಈ ಪೈಕಿ 26 ಕಿರಿಯ ಪ್ರಾಥಮಿಕ ಮತ್ತು 10 ಹಿರಿಯ ಪ್ರಾಥಮಿಕ ಶಾಲೆಗಳಿವೆ.

ಈ ಶಾಲೆಗಳಲ್ಲಿ 32 ಕೊಠಡಿಗಳ ಕೊರತೆ ಇದೆ.

ಗ) ಆರ್,ಐ.ಡಿ.ಎಫ್, ಪಿ.ಎಂ.ಜಿ.ವೈ, ಇಎಫ್.ಸಿ ಯೋಜನೆಯಡಿಯಲ್ಲಿ ಹಂತ ಹಂತವಾಗಿ ಕೊರತೆ ನೀಗಿಸಲಾಗುತ್ತಿದೆ. ಎಸ್.ಎಸ್.ಎ. ಅಡಿಯಲ್ಲಿ ಎಂ.ಎಚ್.ಆರ್.ಡಿ ರೂಪಿಸಿರುವ ನಿಯಮದಂತೆ ಅನುದಾನದಲ್ಲಿ ಶೇ. ಶೇ. 33 $^{1}/_{3}$ರಷ್ಟು ಸಿವಿಲ್ ಕಾಮಗಾರಿಗಾಗಿ ಮೀಸಲಿರಿಸಿದೆ. ಇರುವ ಅನುದಾನದಲ್ಲಿ ಅರ್ಹ ಶಾಲೆಗಳಿಗೆ ಸೌಲಭ್ಯವನ್ನು ಒದಗಿಸಲು ಪ್ರಯತ್ನಿಸಲಾಗುವುದು.

ಎ) ಮಾಗಡಿ ತಾಲ್ಲೂಕಿನಲ್ಲಿ 36 ಸರ್ಕಾರಿ ಉರ್ದುಶ ಶಾಲೆಗಳಿರುತ್ತವೆ. ಈ ಶಾಲೆಗಳಲ್ಲಿ 92 ಶಿಕ್ಷಕರು ಸಲ್ಲಿಸುತ್ತಿದ್ದು ನಿಯಮಾವಳಿಗಳ ಪ್ರಕಾರ 36 ಉರ್ದು ಶಿಕ್ಷಕರು ಹೆಚ್ಚುವರಿಯಾಗಿರುತ್ತಾರೆ.

ಈ ಶಾಲೆಯಲ್ಲಿ 1 ರಿಂದ 7 ನೇ ತರಗತಿಯವರೆಗೆ ಒಟ್ಟು 1424 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಈ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯು ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತಕ್ಕಿಂತ ಹೆಚ್ಚಾಗಿರುತ್ತದೆ. ಶಿಕ್ಷಕರ ಕೊರತೆ ಇರುವುದಿಲ್ಲ.

ಏ) ಕೊರತೆ ಇರದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

2460 (2962) ಶ್ರೀ ಬಾಸಲಕೃಷ್ಣ ಹೆಚ್.ಸಿ (ಮಾಗಡಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಕ್ಷೇತ್ರದಲ್ಲಿ ಎಷ್ಟು ಪ್ರೌಢಶಾಲೆಗಳಿವೆ ;

ಆ) ಎಷ್ಟು ಪ್ರೌಢಶಾಲೆಗಳು ಸ್ವಂತ ಕಟ್ಟಡ ಹೊಂದಿವೆ ಮತ್ತು ಪ್ರೌಢಶಾಲೆಗಳಿಗೆ ಕೊಠಡಿಗಳ ಕೊರತೆ ಇದೆಯೆ ;

ಇ) ಇದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು ;

ಈ) ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು ;

ಊ) ಮಾಗಡಿ ಕ್ಷೇತ್ರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಎಷ್ಟಿವೆ ;

ಋ) ಕಾಲೇಜುಗಳಿಗೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ೠ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮ ಏನು ;

ಎ) ಈ ಕಾಲೇಜುಗಳಲ್ಲಿ ಉಪನ್ಯಾಸಕರ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಏ). ಬಂದಿದ್ದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ಪೂರ್ಣ ವಿವರ ನೀಡುವುದು)?